CENTUM

# ಸುರಕ್ಷತೆ ಹಾಗೂ ಆರೋಗ್ಯ ನೀತಿ

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ತನ್ನ ಎಲ್ಲಾ ನೌಕರರಿಗೆ, ಗುತ್ತಿಗೆದಾರರಿಗೆ ಹಾಗೂ ಸಂದರ್ಶಕರಿಗೆ ಸುರಕ್ಷಿತ ಮತ್ತು ಆರೋಗ್ಯಕರ ಪರಿಸರ ಒದಗಿಸಲು ಬದ್ಧವಾಗಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕೆಳಗಿನ ಕ್ರಮಗಳ ಮೂಲಕ ಗಾಯಗಳು, ಅಪಘಾತಗಳು ಮತ್ತು ಔದ್ಯೋಗಿಕ ಅನಾರೋಗ್ಯಗಳನ್ನು ತಡೆಗಟ್ಟುವ ಗುರಿ ಹೊಂದಿದೆ.

- ಎಲ್ಲ ನೌಕರರಿಗೆ ಅಗತ್ಯವಾದ ಸಂಪನ್ಮೂಲಗಳು, ತರಬೇತಿ ಹಾಗೂ ಶಿಕ್ಷಣದ ಮೂಲಕ ದೈನಂದಿನ ಚಟುವಟಿಕೆಗಳಲ್ಲಿ ಅತ್ಯುತ್ತಮ ಸುರಕ್ಷತಾ ಕ್ರಮಗಳ ಅನುಸರಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು.
- ನಮ್ಮ ವ್ಯವಹಾರಗಳಿಗೆ ಅನುಗುಣವಾಗುವಂತೆ ಈ ನೀತಿಯನ್ನು ಸ್ಥಾಪಿಸುವಲ್ಲಿ, ನಿರ್ವಹಿಸುವಲ್ಲಿ ಹಾಗೂ ಅಭಿವೃದ್ಧಿಪಡಿಸುವಲ್ಲಿ ಎಲ್ಲ ನೌಕರರನ್ನು ಪಾಲ್ಗೊಳಿಸುವುದು ಹಾಗೂ ಪ್ರೋತ್ಸಾಹಿಸುವುದು.
- ನೌಕರರು ಕೆಲಸದ ಅವಧಿಯಲ್ಲಿ ಕಾರ್ಯನಿರ್ವಹಿಸಲು ಗೊತ್ತುಪಡಿಸಿದ ಮಾನದಂಡಗಳನ್ನು ಅಳವಡಿಸುವುದು. ಎಲ್ಲಾ ಸುರಕ್ಷತಾ ಅಂಶಗಳನ್ನು ಪರಿಗಣಿಸಿ ಪ್ರಕ್ರಿಯೆಗಳನ್ನು ವಿನ್ಯಾಸ ಹಾಗೂ ಅಭಿವೃದ್ಧಿ ಮಾಡುವುದು.
- ಅನ್ವಯಿಸುವ ಎಲ್ಲಾ ಔದ್ಯೋಗಿಕ ಆರೋಗ್ಯದ ಮತ್ತು ಸುರಕ್ಷತೆಯ ಕಾನೂನು ಹಾಗೂ ಇತರೆ ಅಗತ್ಯತೆಗಳನ್ನು ಪೂರೈಸುವುದು.
- ನಮ್ಮ ಚಟುವಟಿಕೆಗಳಲ್ಲಿ, ಪ್ರಕ್ರಿಯೆಗಳಲ್ಲಿ, ಉತ್ಪನ್ನಗಳಲ್ಲಿ ಹಾಗೂ ಸೇವೆಗಳಲ್ಲಿ ಅನ್ವಯಿಸುವ ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತಾ ಕಾರ್ಯನಿರ್ವಹಣೆಯ ನಿರಂತರ ಸುಧಾರಣೆಗೆ ಶ್ರಮಿಸುವುದು.

ಅಪ್ಪಾರಾವ್ ಮಲ್ಲವರಪು
ಅಧ್ಯಕ್ಷರು ಹಾಗೂ ನಿರ್ವಾಹಕ ನಿರ್ದೇಶಕರು

ಪರಿಷ್ಕರಣೆ: ೦
ದಿನಾಂಕ: ೧೨.೦೯.೨೦೧೩